ದಿಃ **15-11-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. **MBK** ವಕೀಲರವರಿಂದಃ

**01. 1985** ರಲ್ಲಿ ಮಾಡಿಕೊಂಡ ಪಾಲು ವಿಭಾಗ ಪತ್ರದಲ್ಲಿ ಮೃತ ಕೋಗನೂರು ಶೇಖಪ್ಪರವರ ತಂದೆ ದೊಡ್ಡಬಸಪ್ಪರವರ ಹೆಸರು ಇರುವ ಕಾರಣ ಪಾಲು ವಿಭಾಗ ಪತ್ರದಲ್ಲಿ ದಾವಾ ಸ್ವತ್ತನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಮನೆತನಕ್ಕೆ ಸಂಬಂಧ ಪಡದ ಸ್ವತ್ತು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅದು ನಮ್ಮ ಅಜ್ಜನ ಸ್ವತ್ತು ಎಂದು ಹೇಳುತ್ತಾರೆ. ಈ ದಾವಾ ಸ್ವತ್ತನ್ನು ಪಾಲು ವಿಭಾಗ ಪತ್ರದಲ್ಲಿ ತೋರಿಸದೆ ಇರುವ ಕಾರಣಕ್ಕೆ ಪಾಲು ವಿಭಾಗ ಪತರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ಅವರ ಮನೆತನದವರು ಪಾಲು ವಿಭಾಗ ಕೋರಿ ಇದೇ ನ್ಯಾಯಾಲಯದ ಮುಂದೆ ಅಸಲು ದಾವಾ ಸಂಖ್ಯೆ **146/2013** ಹೂಡಿರುತ್ತಾರೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ **146/2013** ರಲ್ಲಿ ಈ ದಾವಾ ಆಸ್ತೀಯು ಒಂದಾಗಿರುತ್ತದೆ ಎಂದೆರ ಸರಿಯಲ್ಲ. ಅಸಲು ದಾವಾ ಸಂಖ್ಯೆ **146/2013** ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಮಾಹಿತಿ ಇರುತ್ತದೆ ಎಂದು ಸಾಕ್ಷಿಯು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ **146/2013** ರಲ್ಲಿ ನನ್ನನ್ನು ಈ ದಾವೆಯಲ್ಲಿ ಸೇರ್ಪಡಿಸಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ದಾವಾ ಆಸ್ತೀಯು ನಮ್ಮದು ಅಲ್ಲದೇ ಇರುವುದು ನನಗೆ ಗೊತ್ತಿರುವದ್ದಕ್ಕೋಸ್ಕರ ನಾನು ಅಸಲು ದಾವಾ ಸಂಖ್ಯೆ **146/2013** ರಲ್ಲಿ ನನ್ನನ್ನು ದಾವೆಯಲ್ಲಿ ಸೇರ್ಪಡಿಸಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಅಲು ದಾವಾ ಸಂಖ್ಯೆಃ **146/2013** ಈ ನ್ಯಾಯಾಲಯದಲ್ಲಿ ತೀರ್ಪು ಆಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆಯ ಮೇಲೆ ಪ್ರತಿವಾದಿಯರು ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ ಹಡಗಲಿಯಲ್ಲಿ **03** ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

**02.** ದಾವಾ ಆಸ್ತೀಯ ಚೆಕ್ಕ ಬಂದಿಯು ಸರಿಯಾಗಿರುವುದಿಲ್ಲ ಸಂಪೂರ್ಣ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಪ್ರತಿವಾದಿಯರ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಇವತ್ತಿಗೂ ಕೂಡ ದಾವಾ ಆಸ್ತೀಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಗಳು, ಋಣಭಾರ ಪತ್ರಿಕೆಗಳು, ಆಕಾರಬಂದ್, ನಕಾಶೆಗಳು ಪ್ರತಿವಾದಿಯರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ನನಗೆ ಎಲ್ಲವೂ ಗೊತ್ತಿದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ರಾಮಲೆಕ್ಕಾಧಿಕಾರಿಗಳಾದ ಲಕ್ಷ್ಮಣರಾವ್ ಮತ್ತು ಶರಣಗೌಡರ ಇವರು ಪರಿಚಯ ಇರುತ್ತಾರೆ ಎಂದರೆ ಸಾಕ್ಷಿಯು ಬಂದು ಹೋಗಿ ಮಾಡುತ್ತಾರೆ. ಶರಣಗೌಡರ ನಮ್ಮ ಮನೆಯಲ್ಲಿ ಸುಮಾರು **10** ವರ್ಷಗಳ ಕಾಲ ವಾಸವಿದ್ದರು ಎಂದರೆ ಸರಿ. ಶರಣಗೌಡರ ರವರು ಸುಮಾರು **1982-1883** ರಿಂದ **1990-1991** ರವರೆಗೆ ಇರಬಹುದು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಾವು ಚಿಕ್ಕವರಿದ್ದಾಗ ಅವರು ಇದ್ದರು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಇರುವ ಭಾಗದ ಜನರು ತಮಗೆ ಸಂಬಂಧಿಸಿದ ದಾಖಲಾತಿ ಕೆಲಸಗಳಿಗೆ ಶರಣಗೌಡರು ಇರುವ ಮನೆಗೆ ಬಂದು ಕೆಲಸ ಮಾಡಿಸಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆ ಕಾಲದಲ್ಲಿ ಬಸ್ಸ ಸಮಸ್ಯೆ ಇದ್ದರಿಂದ ಕಂದಾಯ ಇಲಾಖೆಯ ಕಾಗದಗಳನ್ನು ಶರಣಗೌಡರು ತಮ್ಮ ಮನೆಯಲ್ಲಿ ಇಟ್ಟುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಅವರು ವರ್ಗಾವಣೆ ಆಧಾಗ ಸುಮಾರು ದಾಖಲಾತಿಗಳನ್ನು ನಮ್ಮ ಮನೆಯಲ್ಲಿ ಮರೆತು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಇವತ್ತಿಗೂ ಕೆಲವೊಂದು ದಾಖಲಾತಿ ನಮ್ಮ ಮನೆಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ದಿ.**27-01-2016** ರ ಉಪತಹಶೀಲ್ದಾರ ನಾಡ ಕಾರ್ಯಾಲಯ ಹಿರೇಹಡಗಲಿರವರು ನೀಡಿರುವ ಹಿಂಬರಹವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಅದರಲ್ಲಿರುವ ದಿನಾಂಕವನ್ನು ತೋರಿಸಿದಾಗ, ಅಂದು ನಾನೇ ಅರ್ಜಿಯನ್ನು ಸಲ್ಲಿಸಿ ಹಿಂಬರಹವನ್ನು ತೆಗೆದುಕೊಂಡಿರುತ್ತೇನೆ ಎಂದು ಸಾಕ್ಷಿಯು

ಒಪ್ಪಿಕೊಳ್ಳುತ್ತಾರೆ. ಸಾಮಾನ್ಯವಾಗಿ ಯಾರು ಅರ್ಜಿ ಸಲ್ಲಿಸಿರುತ್ತಾರೆ ಅವರ ಹೆಸರಿನಲ್ಲಿ ಹಿಂಬರಹವನ್ನು ನೀಡುತ್ತಾರೆ ಎಂದರೆ ಸರಿ. ಮೃತ ಶೇಖಪ್ಪ ಅವರ ಹೆಸರಿನಲ್ಲಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಬೇರೆಯವರ ಹತ್ತಿರ ಅದನ್ನು ತರಿಸಲು ಕಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳಿದ್ದಕ್ಕೆ ಅವರು ನನಗೆ ತೆಗೆದುಕೊಂಡು ಬಂದಿರುತ್ತಾರೆ. ನಾನೇ ತೆಗೆದುಕೊಂಡು ಬಂದು ಬೇರೆಯವರು ಹಿಂಬರಹವನ್ನು ತೆಗೆದುಕೊಂಡು ಬಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾರಿಂದ ನಾನು ಹಿಂಬರಹವನ್ನು ತರೆಸಿರುತ್ತೇನೆ ಎಂಬುವುದು ಹೇಳಲು ನನಗೆ ನೆನಪು ಇರುವುದಿಲ್ಲ. ಈ ದಾವಾ ಆಸ್ತೀಗೆ ಸಂಬಂಧಪಟ್ಟ ಹಕ್ಕು ಬದಲಾವಣೆ ವಹಿ ಕಳೆದು ಹೋಗಿರುತ್ತದೆ ಎಂದರೆ ಸರಿಯಲ್ಲ. ಮಾನ್ಯ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

"ನನ್ನ ಸಮಕ್ಷಮ"

ಓ. ಹೇ. ಕೇ. ಸರಿ ಇದೆ

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.